ಶ್ರೀ ವೀರೇಂದ್ರ ಪಾಟೀಲ್:—ಮಾನ್ಯ ಸದಸ್ಯರಿಯಂರು ಪೋಲೀಸರು ಸ್ವಲ್ಪಮಟ್ಟಿಗೆ ಅಲ್ಲಿರುವಂತಹ ವರ್ತಕರ ಮೇಲೆ ಮತ್ತು ಎರಡನೇದವರ ಮೇಲೆ ಮಾನ ಭಂಗ ಮಾಡುವಂತೆ ವರ್ತನೆ ಮಾಡಿದ್ದಾರೆ ಅನ್ನುವಂತಹ ವಿಚಾರ ಹೇಳಿದ್ದಾರೆ. ನಾನು ಮೊದಲೇ ಟ್ರಂಕ್ ಕಾಲ್ ಮಾಡಿ ಆ ರೀತಿ ಆಗದಂತೆ ನೋಡಿಕೊಳ್ಳಬೇಕೆಂದು ಹೇಳಿದ್ದೆ. ಈಗಾಗಲೆ ಈ ಘಟನೆಗಳೆಲ್ಲಾದರ ಬಗ್ಗೆ ಕೇಸು ರಿಜಿಸ್ಟರ್ ಆಗಿ ಕೋರ್ಟಿನ ಮುಂದೆ ಹೋಗಿದೆ. ಆದ್ದರಿಂದ ಅವುಗಳ ಬಗ್ಗೆ ಪೂರ್ತಿಯಾಗಿ ವಿವರಣೆ ಕೊಡುವಂತಹ ಪರಿಸ್ಥಿತಿಯಲ್ಲಿ ನಾನು ಇಲ್ಲ.

ALLOTMENT OF DAYS TO TAKE UP NON-OFFICIAL BUSINESS IN THE HOUSE.

3-30 P.M

† ಶ್ರೀ ಎಚ್. ಎನ್. ನಂಜೇಗೌಡ(ನಂಜನಗೂಡು):—ನನ್ನ ಆಬ್‌ಜಕ್ಷನ್ ಒಂದಿದೆ ರೂಲ್ ೨೮(೧)ರ ಪ್ರಕಾರ ೧೪ ದಿವಸ ಸಭೆ ನಡೆದರೆ ಖಾಸಗಿ ಕಾರ್ಯಕಲಾಪಗಳಿಗೆ ೨-೩ ದಿವಸಗಳನ್ನಾದರೂ ಕೊಡಬೇಕು ಫೆಬ್ರವರಿ ೧೯ ರಿಂದ ಇಲ್ಲಿಯವರೆಗೆ ಸಭೆ ನಡೆದಿರುವಾಗ ಕನಿಷ್ಠ ೬ ಆಥವ ೭ ದಿವಸಗಳಾದರೂ ಖಾಸಗಿ ಕಾರ್ಯಕಲಾಪಗಳಿಗೆ ವಿನಿಯೋಗಿಸಬೇಕಾಗಿತ್ತು. ಆದರೆ ನಿನ್ನೆ ಒಂದೂವರೆ ಗಂಟೆ ಮಾತ್ರ ಕೊಟ್ಟಿದೆ. ಮುಂದಿನ ಅಧಿವೇಶನದಲ್ಲಿ ಅವಕಾಶ ಕೊಡುವುದಾಗಿ ಹೇಳಬಹುದು. ಆದರೆ ಹಿಂದಿನ ಅನುಭವ ನೋಡಿದರೆ ಪ್ರಿವಿಲೇಜಸ್ ಇಷ್ಯೂ ಮುಂತಾದವುಗಳ ಮೇಲೆ ಡಿಬೇಟ್ ಇನ್ನೂ ನಡೆಯುವುದರಲೇ ಇದೆ. ಬೇಕಾದಷ್ಟೂ ಖಾಸಗಿ ಕಾರ್ಯ ಕಲಾಪಗಳು ಬಾಕಿ ಇವೆ. ಜಿಲ್ಲೆಗಳೂ ಇವೆ. ಎಸ್ಟಿಮೇಟ್ಸ್ ಕಮಿಟಿ ವರದಿ ಇದೆ, ಪ್ರಿವಿಲೇಜಸ್ ಇಷ್ಯೂ ಮುಂತಾದ್ದಿವೆ, ಹೀಗೆ ಅನೇಕ ಖಾಸಗಿ ಕಾರ್ಯಕಲಾಪಗಳಿರುವಾಗ ಕೂಡ ಸರಕಾರಿ ಕಾರ್ಯಕಲಾಪಗಳಿಗೇ ಹೆಚ್ಚು ಅವಕಾಶ ಕೊಡಲಾಗುತ್ತಿದೆ. ಮತ್ತು ಆ ಸನ್ನಿವೇಶವು ಮುಂದುವರೆಯುತ್ತಿರುವುದನ್ನು ನೋಡಿದರೆ ಖಾಸಗಿ ಕಾರ್ಯಕಲಾಪಗಳಿಗೆ ಕೊಡಬೇಕಾದ ಗೌರವ ಕೊಡುತ್ತಿಲ್ಲ ಎಂಬ ಅಭಿಪ್ರಾಯ ಬರುವುದಕ್ಕೆ ಅವಕಾಶವಾಗಿದೆ: ನಿನ್ನೆ ತಾರೀಖು ಈ ಅಧಿವೇಶನ ಮುಗಿಯುವುದೆಂದು ತಿಳಿದುಬಂದಿದೆ ನಮ್ಮ ಖಾಸಗಿ ಕಾರ್ಯಕಲಾಪಗಳಿಗೆ ಮುಂದಿನ ಅಧಿವೇಶನದವರೆಗೆ ಕಾಯುಬೇಕಾಗಿಲ್ಲ. ಪ್ರಾರಂಭದಲ್ಲಿ ಮಾರ್ಚಿ ೩೦-೩೧ ರೊಳಗೆ ಬಜೆಟ್ ಪಾಸ್ ಆದನಂತರ ಖಾಸಗಿ ಕಾರ್ಯಕಲಾಪಗಳನ್ನು ತೆಗೆದುಕೊಳುವುದಾಗಿ ಹೇಳಿದಿರಿ. ಇನ್ನು ನಮಗೆ ೭ ದಿವಸ ಕೊಡಬೇಕಾಗಿತ್ತು, ಆದರೆ ಒಂದೂವರೆ ಗಂಟೆ ಮಾತ್ರ ಕೊಡಲಾಗಿದೆ. ಸರ್ಕಾರಕ್ಕೆ ಬಿಲ್ ಪಾಸ್ ಮಾಡಿಸಿಕೊಳ್ಳಲು ಆತುರವಾಗಿದೆ ಸರ್ಕಾರದ ಕೆಲಸ ಮಾಡುವುದಕ್ಕೆ ಮಾತ್ರ ನಾವು ಈ ಸಭೆಯಲ್ಲಿರುವುದಾದರೆ ಖಾಸಗಿ ಕಲಾಪಗಳನ್ನು ಡಿಲೀಟ್‌ಮಾಡಿ ನಮ್ಮ ಹಕ್ಕನ್ನು ಮೊಟಕುಮಾಡಿದರೆ ಅದೊಂದು ರೀತಿ ಪ್ರೈವೇಟ್‌ಮೆಂಬರ್ ಬಿಸಿನಸ್‌ಗೆ ಅಸಕ್ತಿ ತೋರಿಸಬೇಕು, ಅಧ್ಯಕ್ಷರು ನಮಗೆ ರಕ್ಷಣೆ ಕೊಟ್ಟು ಸಹಾಯ ಮಾಡಬೇಕು. ಹಾಗೆ ಮಾಡದೆ ತರಾತುರಿಯಿಂದ ಮುಂದುವರೆಯುವುದಕ್ಕೆ ಅವಕಾಶ ಕೊಡಬಾರದು.

MR. SPEAKER:—There is no Point of Order. The Hon. Member wants allotment of time for Private Members' business. His request is genuine and will be certainly taken into consideration. I shall explain as to what happened at the proper time.

ಶ್ರೀ ಎಚ್. ಎನ್. ನಂಜೇಗೌಡ:— ಖಾಸಗಿ ಕಾರ್ಯಕಲಾಪಗಳಿಗೆ ಅವಕಾಶ ಕೊಡದಿದ್ದರೆ ನಾವೇಕೆ ಇಲ್ಲಿ ಕೂಡಬೇಕು

MR. SPEAKER:—It is the decision of the Business Advisory Committee; and not of the Speaker.

SRI H. N. NANJE GOWDA:—It was stated that the decision was taken unanimously in the Business Advisory Committee. But the Report is not before us. We are not a party to it.

MR. SPEAKER:—All these matters were considered there. The insinuation made by the Hon. Member is not correct.

SRI H. N. NANJE GOWDA:—I rise to a Point of order. Unless the Report of Business Advisory Committee is accepted by the House. We are not bound by it and the decision is not binding on us. It would not be proper to push the item of business.

MR. SPEKER:—There is no Point of order. On the decision of the Business Advisory Committee, I, as Speaker, have a right to take a decision, and accordingly I have allowed the item to be taken up.

ಶ್ರೀ ಎಚ್. ಎನ್ ನಂಜೆಗೌಡ:—ಖಾಸಗಿ ಕಾರ್ಯಕಲಾಪಗಳು ಬೇಡ ಎಂಬ ಅಭಿಪ್ರಾಯವಿದೆಯೆ ? ಹಾಗಿದ್ದರೆ ಹೇಳಿ.

MR. SPEAKER:—I Shall expiarn it later.

SRI H. N. NANJE GOWDA:—Are we to take it that the Chair is very eager to take up only Government business, Sir?

MR. SPEAKER:—Let the Hon. Minister move the Bill.

MYSORE ELECTRICITY (TAXATION ON CONSUMPTION) (AMENDMENT) BILL, 1970

Motion To Consider.

SRI K PUTTASWAMY (Minister for Law, Labour and Parliamentary Affairs): Sir, I, move:—

> "That the Mysore Electricity (Taxation on Consumption) (Amendment) Bill, 1970 be taken....."

SRI H. N NANJE GOWDA:—Sir, I rise to a Point of Order This Bill was introduced Just yesterday and we got copies of the Bill only yesterday. I wish to draw your kind attention to proviso to Rule 73 which says:—

> "Provided that no such motion shall be made until after copies of the Bill have been made available for the use of members, and that except in cases of Appropriation Bills, any member may object to any such motion being made unless copies of the Bill have been so made available for seven days, before the day on which the motion is made....."

Therefore, if the Bill is taken up, it will be a breach of the rules. The Bill may be taken up after seven days.